# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 18–08–2017

ಪ್ರಕಟಣೆಯ ಕೃಪೆಗಾಗಿ

**ಯುವಸಮೂಹದಲ್ಲಿ ನೈತಿಕ ಮೌಲ್ಯಗಳು ಕಡಿಮೆಯಾಗುತ್ತಿವೆ – ಡಾ. ಎಂ. ಪ್ರಭು**

ಕೊಳ್ಳೇಗಾಲ 18–08–2017 : ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಮಾನವೀಯ ಹಾಗೂ ನೈತಿಕ ಮೌಲ್ಯಗಳು ಕಡಿಮೆಯಾಗುತ್ತಿವೆ ಎಂಬ ಮಾತಿದೆ. ಹಾಗಿದ್ದರೆ ಯುವ ಜನತೆಯಲ್ಲಿ ನೈತಿಕತೆಯನ್ನು ಬೆಳೆಸುವ ಅಗತ್ಯವಿದೆ ಎಂದು ಜೆಎಸ್‌ಎಸ್ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 2017–18ನೇ ಸಾಲಿನ ಪೋಷಕರ ಮೊದಲನೆ ಸಭೆಯಲ್ಲಿ ಪ್ರಾಸ್ತಾವಿಕ ನುಡಿ ನೀಡುತ್ತ, ಸಮಾಜ ಒಪ್ಪಿತ ಮಾನವ ವರ್ತನೆಗಳೇ ನೈತಿಕ ಮೌಲ್ಯಗಳು. ಇವುಗಳು ಸ್ವಯಂ ಪ್ರಜ್ಞೆ ಮತ್ತು ವ್ಯವಹಾರದ ಅಲಿಖಿತ ಕಾನೂನುಗಳಿದ್ದಂತೆ ಕಾಲೇಜು ಶಿಕ್ಷಣದಲ್ಲಿ ಇದನ್ನು ಪ್ರತ್ಯೇಕ ವಿಷಯವಾಗಿ ಅಳವಡಿಸದೇ ಇರುವುದು ಮೌಲ್ಯಗಳು ಅಧಃಪತನಕ್ಕೆ ಇಳಿಯಲು ಕಾರಣ ಎಂಬ ಆರೋಪವಿದೆ. ಆದರೆ ಇದಕ್ಕೆ ಶಿಕ್ಷಣದ ಕೊರತೆಯೊಂದೇ ಕಾರಣವಲ್ಲ. ಇದರಲ್ಲಿ ಪಾಲಕರು, ಸಮುದಾಯ, ಒಡನಾಡಿಗಳ ಪಾತ್ರವೂ ಬಲು ಮುಖ್ಯ ಎಂದು ತಿಳಿಸಿದರು.




ಜೆಎಸ್‌ಎಸ್ ಮಹಿಳಾ ಕಾಲೇಜು
ಪೋಷಕರ

